SRI D. B. PAWAR.—If some society comes forward we will see that permission is given for fishing.

SRI M. C. NANAIAH.—The Hon. Minister in his reply has stated that it is on account of the dispute raised by the Tamil Nadu Government, that the Karnataka Government is not permitting the fishermen to fish in the area which is in our jurisdiction. This answer is given by the Government. It is on the record. Would it not conceive that we are encroaching on the rights of Tamil Nadu? I would request this should not go on record.

MR. SPEAKER.—I will hold over the question. Get it verified. See that the answer is suitably modified.

Comparative bus fares of KSRTC and Tamilnadu

483 SRI M. CHANDRASEKHAR (Jayanagar) Will the Minister for Transport and Minor Irrigation be pleased to state.—

(a) the comparative bus fares of K.S.R.T.C. and Tamil nadu R TC.

(i) for mofussil services for distances of 30 km. and 500 km.

(ii) for City Services for distances of 5, 10, 20 and 40 km.

(b) whether it is a fact that the fares of KSRTC are very much higher than that of Tamil Nadu RTC.

(c) if so, the reasons for the same?

SRI M. M. J. SADYOJATHA (Minister for Transport and Minor Irrigation).—

MOFUSSIL FARES

Distance in kms.	K.S.R.T.C		Tamilnadu RTC	
	Express Services	Ordinary Services	Express Services	Ordinary Services
		(in Rupees)		
30 km 5 chargeable stages)	2–70	2–50	2–30	2–30
500 km. (77 chargeable stages)	42–30	38–50	37–50	37–50

CITY FARES

Distance in kms.	K.S.R.T.C.	Tamilnadu R.T,C
		(In Paise)
5	45	50
10	60	70
20	80	95
40	(City services are not operated beyond 32 kms.)	145

The fares of mofussil services of KSRTC are marginally higher than those of Tamil Nadu R.T,C.

The main reasons are

(i) Fares are related to distance in stages.

(ii) Increased cost of operations are due to

(a) High cost of fuel lubricants spare parts etc.,

(b) Increase in wages D.A. etc.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ಮಾನ್ಯ ಮಂತ್ರಿಯವರು ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಗ್ರಾಮಾಂತರ ಪ್ರದೇಶದಲ್ಲಿ ಪ್ರಯಾಣ ದರವು ತಮಿಳುನಾಡಿನ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರಯಾಣ ದರಕ್ಕಿಂತ ಸ್ವಲ್ಪ ಹೆಚ್ಚಿನದಾಗಿದೆ ಎಂದು ಹೇಳಿದ್ದಾರೆ. ಅಂದರೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರಯಾಣದ ದರಗಳು ತಮಿಳುನಾಡಿನ ರಸ್ತೆ ಸಾರಿಗೆ ಸಂಸ್ಥೆಯ ಪ್ರಯಾಣ ದರಕ್ಕಿಂತ ಹೆಚ್ಚಿನದಾಗಿದೆ ಎಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ. ಅಂದಮೇಲೆ ನಮ್ಮಲ್ಲಿ ಪ್ರಯಾಣದ ದರಗಳು ಹೆಚ್ಚಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ತಮಿಳುನಾಡಿನ ಸಾರಿಗೆ ಸಂಸ್ಥೆಯವರು ನಮ್ಮ ಕರ್ನಾಟಕ ಸಾರಿಗೆ ಸಂಸ್ಥೆಯವರಿಗಿಂತ ಹೆಚ್ಚಿನ ರೀತಿಯಲ್ಲಿ ಪ್ರಯಾಣಿಕರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಸ್ವಾಮಿ, ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಎರಡು ಕಾರಣಗಳನ್ನು ಕೊಟ್ಟಿದ್ದಾರೆ. ಇದು ಎಲ್ಲರಿಗೂ ಸಾಮಾನ್ಯವಾಗಿ ಆಗುವಂಥಾದ್ದು. ಅದರಲ್ಲಿ ವಿನು ಹೇಳಿದ್ದಾರೆ ಎಂದರೆ, ಪ್ರಯಾಣದ ದರವು ದೂರದ ಹಂತಗಳಿಂದಾಗಿ ಹೆಚ್ಚಾಗಿದೆ ಮತ್ತು ಇಂಧನದ ಯಂತ್ರೋಪಕರಣದ ಬಿಡಿಭಾಗದ ಹೆಚ್ಚಿನ ಬೆಲೆ ಹಾಗೂ ಹೆಚ್ಚಿನ ಮಜೂರಿ ಹಾಗೂ ದಿನ ಭತ್ಯದ ಕಾರಣಗಳಿಂದಾಗಿ ಸಾರಿಗೆ ಕಾರ್ಯಾಚರಣೆ ಮೆಚ್ಚ ಅಧಿಕಗೊಂಡಿರುವುದರಿಂದ ಪ್ರಯಾಣ ದರ ಹೆಚ್ಚಾಗಿದೆ ಎಂದು ಎರಡು ಕಾರಣವನ್ನು ಕೊಟ್ಟಿದ್ದಾರೆ. ಇದಲ್ಲದೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯವರು ಪ್ರಯಾಣ ದರವನ್ನು ಹೆಚ್ಚಿಸಿರುವುದಕ್ಕೆ ಹೆಚ್ಚಿನ ಕಾರಣಗಳನ್ನು ಹೇಳಿಲ್ಲ. ಸಾರಿಗೆ ಸಂಸ್ಥೆಯ ಸ್ಕೋರ್‌ನಲ್ಲಿ ಉಪಯೋಗವಾಗದೇ ಇರುವಂಥ ಬಿಡಿಭಾಗಗಳ ಸ್ಟಾಕ್ ಹೆಚ್ಚಾಗಿರುವುದು ಮತ್ತು ವರಮಾನದಲ್ಲಿ ಸೋರಿಕೆ ಆಗುತ್ತಿರುವುದರಿಂದ ಈ ಪ್ರಯಾಣ ದರವನ್ನು ಹೆಚ್ಚಿಸಿದ್ದಾರೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಈ ಎರಡು ಕಾರಣಗಳನ್ನು ತಾವು ಏತಕ್ಕೆ ಇದರಲ್ಲಿ ಕೊಟ್ಟಿಲ್ಲ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈ ವರಮಾನದಲ್ಲಿ ಸೋರಿಕೆಯಾಗುತ್ತಿರುವುದರ ಬಗ್ಗೆ ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ನಾವು ಅವರಿಗೆ ಆದೇಶವನ್ನು ಈಗಾಗಲೇ ಕೊಟ್ಟಿದ್ದೇವೆ ಇನ್ನು ಸ್ಕೋರ್‌ನಲ್ಲಿ ಅನುಪಯುಕ್ತವಾದ ಬಿಡಿಭಾಗಗಳು ಹೆಚ್ಚಾಗಿರುವುದರ ಬಗ್ಗೆ ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ನಾನು ಆ ಬಗ್ಗೆ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಸ್ವಾಮಿ, ಬೆಂಗಳೂರಿನಿಂದ ಊಟಿಗೆ ನಮ್ಮ ಕೆ.ಎಸ್.ಆರ್.ಟಿ.ಸಿ. ಬಸ್ ಹೋಗುತ್ತದೆ ಮತ್ತು ಅಲ್ಲಿಂದ ಬೆಂಗಳೂರಿಗೆ ಬರುತ್ತದೆ. ತಮಿಳುನಾಡಿನ ಬಸ್‌ಗಳೂ ಸಹ ಅಲ್ಲಿಗೆ ಹೋಗುತ್ತವೆ ಮತ್ತು ಇಲ್ಲಿಗೆ ಬರುತ್ತವೆ. ಅಲ್ಲಿಂದ ಬೆಂಗಳೂರಿಗೆ ಬರುವಾಗ ನಮ್ಮ ಬಸ್ ತುಂಬುವುದಿಲ್ಲ. ಎಲ್ಲರೂ ತಮಿಳುನಾಡಿನ ಬಸ್‌ಗಳಲ್ಲಿ ಬರುವುದಕ್ಕೆ ಇಚ್ಛೆಪಡುತ್ತಾರೆ. ಇದು ಮಾನ್ಯಮಂತ್ರಿಯವರ ಗಮನಕ್ಕೆ ಬಂದಿದೆಯೇ ? ಹಾಗೆ ಬಂದಿದ್ದರೆ ನಮ್ಮಲ್ಲಿ ಕೂಡ ಹೆಚ್ಚಿನ ಬಸ್‌ಗಳನ್ನು ಪ್ರಾತಿ ಪ್ರಯಾಣಿಕರಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸುವ ಬಗ್ಗೆ ವಿಚಾರ ಮಾಡುತ್ತೀರಾ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದು ನಮ್ಮ ಗಮನಕ್ಕೆ ಬಂದಿಲ್ಲ. ತಾವು ಈ ವಿಚಾರವನ್ನು ಈಗ ನನ್ನ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಪಿ. ರಾಮದೇವ್.—ಸ್ವಾಮಿ, ಇಲ್ಲಿ ಕೊಟ್ಟಿರುವ ದರಗಳನ್ನು ನೋಡಿದರೆ ನಮ್ಮಲ್ಲಿರತಕ್ಕಂಥ ಪ್ರಯಾಣದ ದರ ತಮಿಳುನಾಡಿನಲ್ಲಿರತಕ್ಕಂಥ ಪ್ರಯಾಣದ ದರಗಳಿಗಿಂತ ಜಾಸ್ತಿ ಇದೆ. ಇದನ್ನು ಮಾನ್ಯ ಮಂತ್ರಿಯವರೂ ಒಪ್ಪಿಕೊಂಡಿದ್ದಾರೆ. ಕಳೆದ ಬಜೆಟ್ ಅಧಿವೇಶನದಲ್ಲಿ ನಾನು ಈ ಪ್ರಯಾಣದ ದರಗಳ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕಾದ ಆವಶ್ಯಕತೆ ಇದೆಯೆಂದು ಹೇಳಿದ್ದೆ. ಅದನ್ನು ಮಾನ್ಯ ಮಂತ್ರಿಯವರೂ ಒಪ್ಪಿಕೊಂಡಿದ್ದರು. ಈಗಲೂ ಸಹ ಇಡೀ ರಾಷ್ಟ್ರದಲ್ಲಿ ಇತರ ರಾಜ್ಯಗಳಲ್ಲಿರತಕ್ಕಂಥ ಬಸ್ ಪ್ರಯಾಣದ ದರಗಳಿಗಿಂತ ನಮ್ಮ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ದರಗಳು ಜಾಸ್ತಿಯಾಗಿದೆ ಎಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ಪ್ರಯಾಣದ ದರಗಳನ್ನು ಕಡಿಮೆ ಮಾಡುವ ಬಗ್ಗೆ ಪುನರ್ ವಿಮರ್ಶೆ ಮಾಡತಕ್ಕಂಥಾದ್ದು ಅತ್ಯಾವಶ್ಯಕವಾಗಿರುವುದರಿಂದ ಈ ಬಗ್ಗೆ ಆದಷ್ಟು ಶೀಘ್ರವಾಗಿ ಪುನರ್ ವಿಮರ್ಶೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಕಮಿಟಿಯ ರಿಪೋರ್ಟ್ ಬರುವವರೆಗೂ ಮಾನ್ಯ ಸದಸ್ಯರು ತಾಳ್ಮೆಯಿಂದ ಇರಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈ ಬಸ್ ಪ್ರಯಾಣದ ದರಗಳು ಹೆಚ್ಚಿರುವುದರ ಬಗ್ಗೆ ನಾವು ಹೋದ ವರ್ಷ ಹಾಕಿದ ಪ್ರಶ್ನೆಗೆ ಇವತ್ತು ಉತ್ತರ ಬಂದಿದೆ. ಹೋದ ವರ್ಷ ಇದೇ ಸಂದರ್ಭದಲ್ಲಿ 'ಕೆ.ಎಸ್.ಆರ್.ಟಿ.ಸಿ.ಯವರು ಬಸ್ ದರಗಳನ್ನು ಹೆಚ್ಚಿಸಬೇಕೆಂದಿದ್ದಾರೆ ಎನ್ನತಕ್ಕಂಥ ವಿಚಾರವನ್ನು ನಾವು ಪತ್ರಿಕೆಯಲ್ಲಿ ಓದುತ್ತಿದ್ದೇವೆ ; ಈಗಾಗಲೇ ತಮಿಳುನಾಡು ಮತ್ತು ಇತರ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಈ ದರ ಕಡಿಮೆ ಇದೆ, ನಮ್ಮಲ್ಲಿ ಈಗಾಗಲೇ ಹೆಚ್ಚಾಗಿದೆ ಎಂದು ಹೇಳಿದಾಗ ಈ ಬಗ್ಗೆ ಪರಿಶೀಲಿಸಿ ಸೂಕ್ತವಾಗಿ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದ್ದವರು ಯಥಾಪ್ರಕಾರ ಈ ಬಸ್ ಪ್ರಯಾಣ ದರಗಳನ್ನು ಹೆಚ್ಚಿಸುತ್ತೇವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ಸರ್ಕಾರದವರ ನಿಶ್ಚಿತವಾದ ಅಭಿಪ್ರಾಯವೇನು ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಯಾರು ಆ ರೀತಿ ಹೇಳಿದರೋ ಗೊತ್ತಿಲ್ಲ. ನಾನೇನು ಹೇಳಿಲ್ಲ.

Vacant Posts of Primary School Teachers during the year 1981

573. SRI G. BASAVANNAPPA (Holehonnur)—Will the Minister of State for Primary and Secondary Education be pleased to state :

(a) number of vacancies of the Primary School Teachers proposed to be filled by the Government in the year 1981 ;

(b) the criteria employed in recruiting these teachers ;

(c) whether criteria and recruitment rules are framed for recruiting Primary School Teachers ?